ಓ.ಎಸ್‌ಃ 517/2021
ಡಿ.ಡಬ್ಲ್ಯೂಃ 01

**<u>ದಿನಾಂಕಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ವಾದಿ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದಃ</u>**

1. ನನ್ನ ಹೆಸರಿನಲ್ಲಿ ಕೂಡಗಿ ಗ್ರಾಮದಲ್ಲಿ ಜಮೀನ ಇರುತ್ತದೆ. ಜಮೀನ ಸರ್ವೇ ನಂ. 63/3 ಇರುತ್ತದೆ. ಕೂಡಗಿ ಗ್ರಾಮದಲ್ಲಿ ನನ್ನ ಹೆಸರಿಗೆ ಮನೆ ಜಾಗ ಇರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆಯ ಹೆಸರಿನಲ್ಲಿರುವ ಮನೆ ನಂ.682 ಇರುತ್ತದೆ. ಅದರ ಅಳತೆ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿರುವ ಮನೆಯ ಚಕಬಂದಿ ಹೇಳಲು ಬರುತ್ತದೆ. ನನ್ನ ತಂದೆ ಆಸ್ತಿಯ ಪಶ್ಚಿಮಕ್ಕೆ- ದಾರಿ, ದಕ್ಷಿಣಕ್ಕೆ-ನನ್ನ ಚಿಕ್ಕಪ್ಪನ ಮನೆ, ಉತ್ತರಕ್ಕೆ-ಚಾಂದಾಸಾಬ, ಇಮಾಬಸಾಬರವರ ಮನೆ, ಪೂರ್ವಕ್ಕೆ-ನನ್ನ ಮನೆ, ಅದರ ವ್ಹಿ,ಪಿ.ಸಿ.ನಂ.679 ಇರುತ್ತದೆ. ಸದರಿ ಮನೆ ನನ್ನ ಮಗನಿಗೆ ಬಿಟ್ಟ ಕೊಟ್ಟ ಕಾರನ ನನ್ನ ಹೆಸರಿಗೆ ಯಾವುದೇ ಆಸ್ತಿ ಇಲ್ಲ ಎಂದು ನುಡಿಯುತ್ತಾರೆ.

2. ನಾನು ನನ್ನ ತಂದೆಯ ಮನೆಯಲ್ಲಿ ವಾಸವಾಗಿರುತ್ತೇನೆ. ನನ್ನ ತಂದೆಗೆ ಮೂರು ಜನ ಗಂಡ ಮಕ್ಕಳಿರುತ್ತಾರೆ. ಗುಡುಸಾಬ, ದಸ್ತಗೀರಸಾಬ ಮತ್ತು ಲಾಲೇಸಾಬ. ಗುಡುಸಾಬ ಪಂಚಾಯತಿ ಜಾಗದಲ್ಲಿ ಶೆಡ್ ಇಟ್ಟುಕೊಂಡು ವಾಸವಾಗಿರುತ್ತಾನೆ, ಲಾಲೇಸಾಬ ಬೇರೆ ಮನೆ ಮಾಡಿಕೊಂಡು ವಾಸವಾಗಿರುತ್ತಾನೆ. ಮನೆ ನಂ.679 ನ್ನು ಶಿರಾಜ ಎಂಬುವರಿಂದ ಖರೀದಿ ಮಾಡಿರುತ್ತೇನೆ. ಹಕ್ಕು ಬಿಡುಗಡೆ ಪತ್ರ ಮಾಡಿಕೊಂಡಿರುತ್ತೇನೆ. ಖರೀದಿ ಪತ್ರ ಆಗಿರುವುದಿಲ್ಲ. ಎಷ್ಟು ರೂಪಾಯಿ ಬಾಂಡಿನ ಮೇಲೆ ಮಾಡಿಕೊಂಡಿರುತ್ತೇನೆ ಎಂದು ನನಗೆ ನೆನಪಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

ಓ.ಎಸ್‌ಃ 517/2021

ಡಿ.ಡಬ್ಲ್ಯೂಃ 01

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಅದೆ.**

(ಶ್ರೀ ಅಮಿತ್ ಘಟ್ಟಿ)

ದಿವಾಣಿ ನ್ಯಾಯಾಧೀಶರು ಮತ್ತು

ನ್ಯಾಯಿಕ ದಂಡಾಧಿಕಾರಿಗಳು

ಬಸವನ ಬಾಗೇವಾಡಿ.